ಆ) ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಯಾವುದೇ ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡಿಲ್ಲವಾದ್ದರಿಂದ ನಿವೇಶನಗಳನ್ನು ನಿರ್ಮಿಸಿರುವುದಿಲ್ಲ.

ಇ) ಹೊಸ ನಿವೇಶನಗಳನ್ನು ನಿರ್ಮಿಸಿಲ್ಲವಾದ್ದರಿಂದ ಹೊಸ ನಿವೇಶನಗಳ ಹಂಚಿಕೆ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಹೊಸ ನಿವೇಶನಗಳನ್ನು ನಿರ್ಮಿಸಿಲ್ಲವಾದ್ದರಿಂದ ಹೊಸ ನಿವೇಶನಗಳ ಹಂಚಿಕೆ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಕಳೆದ ಮೂರು ವರ್ಷಗಳಲ್ಲಿ ಹೊಸ ಬಡಾವಣೆಗಳನ್ನು ನಿರ್ಮಿಸದೇ ಇರುವುದರಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಹಜ್ ಯಾತ್ರಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಬಗ್ಗೆ.

402 : (650)

ಶ್ರೀ ಖಾದರ್ ಯು.ಟಿ.(ಮಂಗಳೂರು)

ಅ) ರಾಜ್ಯ ಸರ್ಕಾರ ಕಳೆದ 3 ವರ್ಷಗಳಿಂದ ಹಜ್ ಯಾತ್ರಾರ್ಥಿಗಳಿಗಾಗಿ ವೆಚ್ಚ ಮಾಡಿರುವ ಅನುದಾನವೆಷ್ಟು?

ಆ) ಹೆಚ್ಚಿನ ಯಾತ್ರಾರ್ಥಿಗಳು ಹಜ್ ಪ್ರವಾಸ ಮಾಡಲು ಈಗಿರುವ ಮಿತಿಯನ್ನು ಹೆಚ್ಚಿಸಲಾಗಿದೆಯೇ?

ಶ್ರೀ ಎಸ್.ಕೆ.ಬೆಳ್ಳುಬ್ಬಿ (ಕೃಷಿ ಮಾರುಕಟ್ಟೆ, ಹಜ್ ಮತ್ತು ವಕ್ಫ್ ಸಚಿವರು)

ಅ) ರಾಜ್ಯ ಸರ್ಕಾರವು ಕಳೆದ ಮೂರು ವರ್ಷಗಳಿಂದ ಹಜ್ ಯಾತ್ರಿಗಳಿಗೆ ವೆಚ್ಚ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ;

1. 2012 :– ರೂ.40.52 ಲಕ್ಷಗಳು
2. 2011 :– ರೂ.66.97 ಲಕ್ಷಗಳು
3. 2010 :– ರೂ.26.60 ಲಕ್ಷಗಳು

ಆ) ಕರ್ನಾಟಕ ರಾಜ್ಯ ಹಜ್ ಸಮಿತಿಯಿಂದ 2012ನೇ ಸಾಲಿನಲ್ಲಿ 6952 ಹಜ್ ಯಾತ್ರಿಗಳು ಹಜ್ ಯಾತ್ರೆಯನ್ನು ಕೈಗೊಂಡಿರುತ್ತಾರೆ. 2001ರ ಜನಗಣತಿ ಪ್ರಕಾರ ಕೇಂದ್ರ ಸರ್ಕಾರದ ವಿದೇಶಾಂಗ ಮಂತ್ರಾಲಯ ಹಾಗೂ

ಹಜ್ ಕಮಿಟಿ ಆಫ್ ಇಂಡಿಯಾ ರವರು ಪ್ರತಿ ರಾಜ್ಯಕ್ಕೆ ಹಜ್ ಯಾತ್ರೆಗೆ ಹೋಗುವ ಭಕ್ತಾದಿಗಳ quota ಗಳನ್ನು ನಿಗಧಿಪಡಿಸುತ್ತಾರೆ. ಕರ್ನಾಟಕ ರಾಜ್ಯ ಹಜ್ ಸಮಿತಿಯು ಈಗಿರುವ ಮಿತಿಯನ್ನು ಹೆಚ್ಚಿಸುವ ಬಗ್ಗೆ ಈಗಾಗಲೇ ಹಜ್ ಕಮಿಟಿ ಆಫ್ ಇಂಡಿಯಾ ಇವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತದೆ. ರಾಜ್ಯ ಸರ್ಕಾರವು ಕೇಂದ್ರದ ವಿದೇಶಾಂಗ ಮಂತ್ರಾಲಯದೊಂದಿಗೆ ಸಮಾಲೋಚಿಸಿ 2011ರ ಜನಗಣತಿಯ ಪ್ರಕಾರ 2013ನೇ ಸಾಲಿನಲ್ಲಿ ಹೋಗುವ ಹಜ್ ಯಾತ್ರಾರ್ಥಿಗಳ quota ವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.

ಪ್ರತಿಷ್ಠಿತ ಜೆ.ಎನ್.ನರ್ಮ್ ಯೋಜನೆ

480 : (317)

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ ಕ್ಷೇತ್ರ)

ಅ) ಕೇಂದ್ರ ಸರ್ಕಾರದ ಪ್ರತಿಷ್ಠಿತ ಜೆ.ಎನ್.ನರ್ಮ್ ಯೋಜನೆ ಮೈಸೂರು ನಗರದಲ್ಲಿ ಜಾರಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೈಸೂರು ನಗರಕ್ಕೆ ಪ್ರಾರಂಭಿಕ ಹಂತದಲ್ಲಿ ಮಂಜೂರಾದ ಯೋಜನೆಗಳೆಷ್ಟು; ಇದಕ್ಕೆ ತಗಲುವ ವೆಚ್ಚವೆಷ್ಟು?

ಇ) ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ಮೂಲಕ ಪ್ರಸ್ತಾವನೆ ಸಲ್ಲಿಸಿದ ಯೋಜನೆಗಳೆಷ್ಟು; ಮಂಜೂರಾದ ಯೋಜನೆಗಳೆಷ್ಟು; ಆ ಪೈಕಿ ತಗುಲಿದ ವೆಚ್ಚವೆಷ್ಟು?

ಈ) ರಾಜ್ಯ ಸರ್ಕಾರದಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಬಾಕಿಯಿರುವ ಯೋಜನೆಗಳೆಷ್ಟು?

ಉ) ಮೈಸೂರು ನಗರ ವ್ಯಾಪ್ತಿಯಲ್ಲಿ ಜಾರಿಯಲ್ಲಿರುವ ಕಾಮಗಾರಿಗಳ ವಿವರ, ಬಿಡುಗಡೆಯಾದ ಹಣ, ಗುತ್ತಿಗೆದಾರರಿಗೆ ಬಾಕಿಯಿರುವ ಹಣ ಎಷ್ಟು (ಪೂರ್ಣ ವಿವರ ನೀಡುವುದು)?